ಭೂಮಿಯನ್ನು ಕಳೆದುಕೊಂಡಿದ್ದಾರೆ. ಇವತ್ತಿಗೂ ಕೂಡ ಪರಿಹಾರ ಧನ ಸಿಕ್ಕಿರುವುದಿಲ್ಲ. ಮುಂಡುರಿಗಿ ತಾಲ್ಲೂಕು ಮುರಡಿ ಎಂಬ ಗ್ರಾಮ. ಸಿಂಗಾಟಾಲೂರಿಗೆ ಕೊಟ್ಟಂತೆ ಹೆಚ್ಚಿನ ಪರಿಹಾರಧನವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ತಮಗೂ ಕೂಡ ಅಲ್ಲಿಯ ಜನರು ಬಂದು ಅರ್ಜಿಯನ್ನು ಕೊಟ್ಟಿದ್ದಾರೆ. ತಾವು ಕೂಡ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ದಯವಿಟ್ಟು ಅದರ ಬಗ್ಗೆ ತಾವು ಕೂಡಲೇ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ. ಸಿಂಗಾಟಾಲೂರಿಗೆ ಹೆಚ್ಚಿಗೆ ಏನು ಕೊಟ್ಟಿದ್ದೀರಿ, ಅದೇ ರೀತಿಯಾಗಿ ಹೆಚ್ಚುವರಿ ಪರಿಹಾರಧನವನ್ನು ಅದೇ ರೀತಿಯಾಗಿ ಸಿಗುವಂತೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:(ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಎಸ್.ಎಸ್.ಪಾಟೀಲ್ ರವರು ಸಿಂಗಟಾಲೂರು ಯೋಜನೆಗೆ ಭೂಸ್ವಾಧೀನಕ್ಕಾಗಿ ಪರಿಹಾರವನ್ನು ನಗದಿಪಡಿಸಿರುವಂತೆ ಮುರುಡಿಕೆರೆಗೆ ಭೂಸ್ವಾಧೀನ ಪಡಿಸಿಕೊಂಡಿರುವ ರೈತರ ಬಗ್ಗೆ ಏನು ಮಾಡುತ್ತೀರೆಂದು ತಾವು ಕೇಳಿದ್ದೀರಿ. ನಾನು ಈ ಬಗ್ಗೆ ವಿವರವಾದ ಮಾಹಿತಿಯನ್ನು ತರಿಸುತ್ತಿದ್ದೇನೆ. ನಾನು ತತಕ್ಷಣ ಉತ್ತರವನ್ನು ಕೊಡುವಂತಹ ಸ್ಥಿತಿಯಲ್ಲಿ ಇಲ್ಲ. ತಾವು ಈಗ ಪ್ರಸ್ತಾಪ ಮಾಡಿದ್ದೀರಿ, ಖಂಡಿತವಾಗಿ ನಾನು ಆ ಕಡೆಗೆ ಗಮನವನ್ನು ಕೊಟ್ಟು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಉತ್ತರವನ್ನು ಒದಗಿಸುವ ಬಗ್ಗೆ ನಾನು ಪ್ರಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

(ಊ) ವಿಷಯ: ಗದಗ ತಾಲ್ಲೂಕು, ಹರ್ಲಾಪುರ ಗ್ರಾಮಕ್ಕೆ ಹೊಸ ಕೆರೆ ಮಾಡಿಕೊಡುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್: ಮುಂಡರಗಿ ಕ್ಷೇತ್ರಕ್ಕೆ ಸೇರಿದ ಗದಗ ತಾಲ್ಲೂಕು ಹರ್ಲಾಪುರ ಗ್ರಾಮದ ಹತ್ತಿರ ಹೊಸ ಕೆರೆ ಬೇಕೆಂದು ಹೇಳಿದ್ದೇವು. ಆ ಕೆರೆಯನ್ನು ತಾವು ಮಾಡಿಕೊಡುತ್ತೇವೆಂದು ಬಜೆಟ್‌ನಲ್ಲಿ ಹೋದ ಸಲ ನಬಾರ್ಡ್‌ನಲ್ಲಿ ಸೇರಿಸಿದ್ದೀರಿ, ದುರ್ದೈವದಿಂದ ನಬಾರ್ಡ್‌ನಲ್ಲಿ ಬರಲಿಲ್ಲ. ಅದು ನಿಂತು ಹೋಗಿದೆ, ಅದಕ್ಕಾಗಿ ಅಲ್ಲಿ ಬಹಳ ಅವಶ್ಯವಾಗಿದೆ. ಕೂಡಲೆ ಕೆರೆಯನ್ನು ಮಾಡುವ ಬಗ್ಗೆ ಬಜೆಟ್‌ನಲ್ಲಿ ಸೆರಿಸಿಕೊಂಡು ಮಾಡುತ್ತೀರಾ ಎಂದು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:(ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, ಈ ವರ್ಷವೇ ಅದನ್ನು ತೆಗೆದುಕೊಂಡು ಮೂರನೇ ಒಂದು ಭಾಗ ಹಣವನ್ನು ಅದಕ್ಕಾಗಿ ಒದಗಿಸಿ ಆ ಕಾಮಗಾರಿಯನ್ನು ಪ್ರಾರಂಭ ಮಡುವ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು: ಅಯಿತು, ಮಾನ್ಯ ನಾಗರಾಜ್‌ರವರೆ ತಾವು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್: ನಾನು ಒಂದೇ ಒಂದು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ, ಬಹಳ ಹೊತ್ತು ಮಾಡುವುದಿಲ್ಲ.

ಅಧ್ಯಕ್ಷರು: ಇದೇನು ಮಾನ್ಯ ಪಾಟೀಲ್‌ರವರೇ,

ಶ್ರೀ ಎಸ್.ಎಸ್. ಪಾಟೀಲ್: ನಾನು ಕುಡಿಯುವ ನೀರಿನ ಮಂತ್ರಿಗಳನ್ನು ಕೇಳುತ್ತಿದ್ದೇನೆ.

(ಊ) ವಿಷಯ: ಬಿದರಹಳ್ಳಿ ಹಾಗೂ ಇತರ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಬಿದರಹಳ್ಳಿ ಮತ್ತು ಇತರ ಗ್ರಾಮಗಳಿಗೆ ಕೊಡುವಂತ ಕುಡಿಯುವ ನೀರಿನ ಯೋಜನೆಯು ಕಳೆದ 6 ವರ್ಷಗಳಿಂದ ಹಾಗೆಯೇ ನಿಂತಿದೆ. ಮಾನ್ಯ ಪ್ರಕಾಶ್‌ರವರೇ ತಾವೇ ಅಲ್ಲಿಗೆ ಬಂದು ಅಡಿಗಲ್ಲನ್ನು ಹಾಕಿದ್ದೀರಿ, ಇವತ್ತಿಗೂ ಕೂಡ ಅಲ್ಲಿ ಏನೂ ಆಗಿರುವುದಿಲ್ಲ. ಅದನ್ನು ಯಾವಾಗ ಮುಗಿಸುತ್ತೀರೆಂದು ಖಂಡಿತವಾಗಿ ಹೇಳಬೇಕು. ಅದನ್ನು ಮುಗಿಸುತ್ತೀರಾ ಅಥವಾ ಇಲ್ಲವೆ ಎಂಬುದನ್ನು ತಿಳಿಸಸಬೇಕು. ಏಕೆಂದರೆ ಅಲ್ಲಿ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲದಾಗಿದೆ. ಅಲ್ಲಿ ಎಲ್ಲಾ ಪ್ಲೋರೈಡ್ ಇದೆ, 6 ವರ್ಷವಾದರೂ ಕೂಡ ಅದು ಮುಗಿಯುತ್ತಿಲ್ಲ. ಅಲ್ಲಿರುವ ಕಾಂಟ್ರಾಕ್ಟ್‌ದಾರನು ಅದನ್ನು ಹೊಲಸು ಮಾಡಿದ್ದಾನೆ. ನಿಮ್ಮ ಅಧಿಕಾರಿಗಳು ಸಹ ಅದನ್ನು ಹೊಲಸು ಮಾಡಿದ್ದಾರೆ. ಇದನ್ನು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ, ಖಂಡಿತವಾಗಿ ಮುಗಿಸುತ್ತೀರಾ ಎಂದು ಹೇಳಬೇಕು. ನಾನು ಇದರ ಬಗ್ಗೆ ಪ್ರತಿ ಅಧಿವೇಶನದಲ್ಲಿ ಕೇಳುತ್ತೇನೆ, ಅದೇ ರೀತಿಯಾಗಿ ಹಾರಿಕೆಯ ಉತ್ತರವನ್ನು ಕೊಡುತ್ತಾರೆ. ಅದಕ್ಕಾಗಿ 1 ರಿಂದ 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಇವತ್ತಿಗೂ ಕೂಡ ಅಲ್ಲಿ ನೀರು ಇಲ್ಲದಾಗಿದೆ.